



### ಜಲಪಾತಗಳ ದರ್ಶನ

'ನೋಡಲು ಬಾರೆ ಈ ಜಲಧಾರೆ' (ಆ. 07) ಮುಖಪುಟ ಲೇಖನಗಳು ಕರ್ನಾಟಕದ ಮೂಲೆಮೂಲೆಗಳಲ್ಲಿನ ಜಲಪಾತಗಳ ದರ್ಶನ ಮಾಡಿಸಿದವು. ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸುವ ಮೂಲಕ ಪ್ರವಾಸ ಕೈಗೊಳ್ಳುವವರಿಗೆ ಕೈಪಿಡಿಯಾಗಿ ಹೊರಹೊಮ್ಮಿದೆ. ಸುಂದರವಾದ ಲೇಖನಗಳೊಂದಿಗೆ, ಕಣ್ತುಂಬಿಕೊಳ್ಳುವಂತಹ ಛಾಯಾಚಿತ್ರಗಳನ್ನು ಸಹ ಪ್ರಕಟಿಸಿದ್ದು ಮನಸೂರೆಗೊಂಡಿತು.

—ವಿ.ಆರ್. ಮುರಲೀಧರ್, ಬೆಂಗಳೂರು

### ಮಾರ್ಗದರ್ಶಿ

ಜಲಪಾತಗಳ ಮಾಹಿತಿ ಸಂಗ್ರಹಯೋಗ್ಯ. 'ಜಲಪಾತಕ್ಕೆ ಪ್ರವಾಸ ಹೊರಟ್ರಾ?' (ರೂಪಾ ಕೆ.ಎಂ.) ಲೇಖನದಲ್ಲಿ ಕ್ಷೇಮವಾಗಿ ಹೋಗಿ ಸುರಕ್ಷಿತವಾಗಿ ಹಿಂದಿರುಗಲು ಬೇಕಾದ ಸಲಹೆಗಳು ಮತ್ತು ಮುನ್ನೆಚ್ಚರಿಕೆಗಳು ಪ್ರವಾಸಿಗರಿಗೆ ಉತ್ತಮ ಮಾರ್ಗದರ್ಶಿಯಾಗಿದೆ.

—ಕಾವ್ಯ ಭಾರದ್ವಾಜ್

### ಸಮಗ್ರ ಮಾಹಿತಿ

ಜಲಧಾರೆಗಳ ಕುರಿತ ಪುಟಗಳು ರಂಜನೀಯವಾಗಿವೆ. ಜಲಪ್ರವಾಸಕ್ಕೆ ಹೊರಟರೆ ತೆಗೆದುಕೊಳ್ಳಬೇಕಾದ ಸಾಮಾನು ಸರಂಜಾಮು, ಉಡುಗೆ ತೊಡುಗೆ, ಪರಿಸರಸ್ನೇಹಿ ವರ್ತನೆ, ವಹಿಸಬೇಕಾದ ಜಾಗ್ರತೆ ಕುರಿತ ಸಮಗ್ರ ಲೇಖನ.

—ಕೆ.ವಿ. ರಾಜಲಕ್ಷ್ಮಿ

### ಸುಂದರ ಛಾಯಾಚಿತ್ರಗಳು

ಜಲಪಾತಗಳ ಕುರಿತ ಎಲ್ಲಾ ಲೇಖನಗಳು ತುಂಬಾ ಚೆನ್ನಾಗಿದ್ದವು. 'ಕಾನನದೊಳು ನೀರ ನಿನಾದ' (ಗಣಪತಿ ಹೆಗಡೆ), ನೀ ಅಮೃತಧಾರೆ... (ಸಂತೋಷ ಈ. ಚಿನಗುಡಿ), ಪ್ರಕೃತಿ ಕೊರಳಿನ 'ಮುತ್ತಿನಹಾರ'! (ಎಂ. ಮಹೇಶ್) ಲೇಖನಗಳ ಜೊತೆಗೆ ಛಾಯಾಚಿತ್ರಗಳೂ ಮನಸ್ಸಿಗೆ ಮುದ ನೀಡುವಂತಿದ್ದವು.

—ಅನುರಾಧ ಎಸ್.ಪಿ., ಬೆಂಗಳೂರು

### ಜೋಗದ ಐಸಿರಿ

ಕರ್ನಾಟಕದ ವಿವಿಧ ಜಲಪಾತಗಳ ಚಿತ್ರಗಳೂ, ಲೇಖನಗಳೂ ಮನಸೆಳೆದವು. ಶರಾವತಿಯು ಋತುಮಾನಕ್ಕೆ ಅನುಗುಣವಾಗಿ, ವಿಧವಿಧವಾಗಿ ಜಲಪಾತವಾಗಿ ಧುಮ್ಮಿಕ್ಕುತ್ತಾಳೆ. ಶಿವಮೊಗ್ಗದವಳಾದ ನಾನು, ವರ್ಷದ ಎಲ್ಲಾ ಋತುಗಳಲ್ಲಿಯೂ ಜೋಗ ಜಲಪಾತದ ಸೌಂದರ್ಯವನ್ನು ಕಣ್ತುಂಬಿಕೊಂಡಿದ್ದೇನೆ.

—ಪ್ರಭಾ ಪ್ರಸಾದ್

### ಅದ್ಭುತ ಪತ್ತೇದಾರಿ ಕಥೆ

'ತೆಳ್ಳಗಿನ ಮನುಷ್ಯ' (ಆ. 07, ರವಿರಾಜ ಬೈಕಂಪಾಡಿ) ಕಥೆ ಕನ್ನಡದ ಮೇರು ಪತ್ತೇದಾರಿ ಕಾದಂಬರಿಕಾರ ಎಂ. ರಾಮಮೂರ್ತಿಯವರನ್ನು ನೆನಪಿಸಿತು. ಕುತೂಹಲಕರ ಆರಂಭ, ಅನಿರೀಕ್ಷಿತ ಬೆಳವಣಿಗೆ, ಪತ್ತೇದಾರನ ಧೈರ್ಯ, ಸಾಹಸ, ಚುರುಕಾದ ಚಿಂತನೆ, ಕಾನೂನು ಕ್ರಮ ಬಿಟ್ಟು ಹೊರಗೆ ಹೋಗದ ಎಚ್ಚರ ಮತ್ತು ಪೊಲೀಸ್ ವ್ಯವಸ್ಥೆಯೊಂದಿಗೇ ಅನುಸಂಧಾನ ಎಲ್ಲವೂ ರಾಮಮೂರ್ತಿಯವರ ಶೈಲಿಯ ವೈಶಿಷ್ಟ್ಯಗಳೇ. ಬಹಳ ಕಾಲದ ನಂತರ ಅದ್ಭುತ ಪತ್ತೇದಾರಿ ಕಥೆ ಓದಿದ ಅನುಭವ ಆಹ್ಲಾದಕರವಾಗಿತ್ತು.

—ಕುಚ್ಚಣ್ಣ ಶ್ರೀನಿವಾಸನ್



### ಕುತೂಹಲ ಕೆರಳಿಸಿತು

ಕಥಾ ನಿರೂಪಣೆ ಶೆರ್ಲಾಕ್ ಹೋಮ್ಸ್ ನೆನಪಿಸುತ್ತದೆ. ಕಥೆ ಚಿಕ್ಕದಾಗಿದ್ದರೂ ಕುತೂಹಲ ಕೆರಳಿಸುತ್ತದೆ ಮತ್ತು ಇದೇ ಕುತೂಹಲವನ್ನು ಕೊನೆಯವರೆಗೂ ಕಾಪಾಡುವಲ್ಲಿ ಯಶಸ್ವಿ ಆಗಿದೆ. ಗುರು ನಾವಳ್ಳಿ ಅವರ ಕಲೆ ಕಥೆಯ ಮೆರುಗನ್ನು ಮತ್ತಷ್ಟು ಹೆಚ್ಚಿಸುತ್ತದೆ.

—ರಾಜೇಂದ್ರ, ಬೆಂಗಳೂರು

### 'ಅವರವರ ಭಾವ'ದ ಅನಾವರಣ

'ಅವರವರ ಭಾವಕ್ಕೆ...' (ಜು. 31, ವಸುಮತಿ ಉಡುಪ) ಕಥಾ ನಿರೂಪಣೆ ಬಹಳ ಸುಂದರವಾಗಿದೆ. ಕಷ್ಟ ಬಂದಾಗ ಒಂದು ಆಧಾರವಾಗಿರುತ್ತದೆಂದು ದೇವರನ್ನು ನಂಬುವ ಅಪ್ಪ, ಅಂತಃಶಕ್ತಿಯಿಂದ ಕಷ್ಟಗಳನ್ನೆದುರಿಸುವವರಿಗೆ ಬೇರೆ ದೇವರು ಬೇಕಿಲ್ಲ, ಕಾಯಕ ಶ್ರದ್ಧೆಯೇ ದೇವರು ಎಂದೆನ್ನುವ ಮನೋರಮಾ; ಅಪ್ಪ ಹೆಂಡತಿಯ ನಿಲುವುಗಳಿಂದ ಅತ್ತಿತ್ತ ಹೊಯ್ದಾಡುವ ರಾಘವ, ಕಡುಕಷ್ಟವೇ ಎದುರಾದಾಗಲೂ ದೇವರ ಮೇಲೆ ಭಾರ ಹಾಕಿ ನಿರುಮ್ಮಳವಾಗಿರುವ ಸತ್ಯನ ಕುಟುಂಬ, ಅಂತಃಶಕ್ತಿಯೂ ಇಲ್ಲದೆ, ದೇವರ ಮೇಲಿನ ನಂಬಿಕೆಯೂ ಇಲ್ಲದೆ ಕೊರಗಿ ಸೊರಗುವ ವಿಶ್ವ—ಇವರೆಲ್ಲರ ಮೂಲಕ ಭಾವನೆಯನ್ನು ನಂಬಿಕೆಯನ್ನು ಚಿತ್ತಸ್ಥೈರ್ಯವನ್ನು ದುರ್ಬಲ ಚಿತ್ತವನ್ನು ಬದುಕಿನ ಬವಣೆಗಳನ್ನು ಬಾಂಧವ್ಯದ ಬಂಧುರತೆಯನ್ನು ಸುಂದರವಾಗಿ ನಿರೂಪಿಸಿರುವ ಕಥೆ ಮನಸೂರೆಗೊಂಡಿತು.

—ಕೆ.ಆರ್. ಉಮಾದೇವಿ ಉರಾಳ, ತೀರ್ಥಹಳ್ಳಿ

### ಹುಲಿ ಸಂರಕ್ಷಣೆ ಪ್ರಶ್ನೆಗಳು

'ಮಹಾತಾಯಿ ಬೆಲ್ದಂಡ' (ಜು. 31, ಗುರುರಾಜ್ ಎಸ್. ದಾವಣಗೆರೆ), ಹುಲಿಗಳ ಸಂರಕ್ಷಣೆಯ ಕುರಿತು ಹಲವು ಪ್ರಶ್ನೆಗಳನ್ನು ಎತ್ತಿದೆ. ಹುಲಿಯ ಹೋರಾಟದ ಬದುಕು ಮನುಷ್ಯರಿಗೂ ಸ್ಫೂರ್ತಿ ತರುವಂತಿದೆ. ಮಧ್ಯಪ್ರದೇಶದ ನಂತರ ದೇಶದ ಹುಲಿಗಳ ಸಂಖ್ಯೆಯಲ್ಲಿ ಎರಡನೆಯ ಸ್ಥಾನದಲ್ಲಿರುವ ನಮ್ಮ ರಾಜ್ಯದಲ್ಲಿ ಸಂರಕ್ಷಣೆಯ ಕೆಲಸ ಇನ್ನೂ ಸದೃಢವಾಗಬೇಕು. ಹೃದಯಸ್ಪರ್ಶಿ ಲೇಖನ.

—ಜ್ಯೋತಿ ಹೆಗಡೆ, ಬೆಂಗಳೂರು

### ಪಾಲಕರಿಗೆ ಪಾಠ

'ಮಾತೃಭಾಷೆ ಕಲೀಲಿ ಮೊದಲು' (ಆ. 07, ರಶ್ಮಿ ಎಸ್) 'ನಿಮ್ಮೊಡನೆ' ಓದಿದೆ. ಒಂದು ಕಡೆ, ತಮ್ಮ ಮಕ್ಕಳು ಕೈತುಂಬ ಸಂಬಳ ತರುವ ಉದ್ಯೋಗ ಪಡೆಯಬೇಕೆಂದರೆ ಇಂಗ್ಲಿಷ್ ಮಾಧ್ಯಮದಲ್ಲಿ ಓದಬೇಕೆಂಬ ಪಾಲಕರ ಅಪಕಲ್ಪನೆ, ಮತ್ತೊಂದೆಡೆ ತ್ರಿಭಾಷಾ ಸೂತ್ರದಿಂದ ಹಿಂದಿ ಎಂಬ ಅಪರಿಚಿತ ಭಾಷಾ ಕಲಿಕೆಯ ಹೇರಿಕೆ. ಈ ಎರಡರ ನಡುವೆ ಮಗು ಕಲಿಕೆಯ ಸಂತೋಷ ಕಳೆದುಕೊಳ್ಳುತ್ತಿದೆ. ಪಾಲಕರಿಗೆ ಈ ಬರಹ ಪಾಠವಾಗಿದೆ.

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

### ಶ್ಲಾಘನೀಯ ಕೆಲಸ

'ಕಲಿಕೆಗೆ ಜೀವ ತುಂಬಿದ ಅವಿರತ' (ಆ. 07, ಶಶಿಕುಮಾರ್ ಸಿ.) ಅವಿರತ ಸಂಸ್ಥೆಯ ಸಮಾಜಮುಖಿ ಸೇವೆ, ಫಲಾಪೇಕ್ಷೆ ಇಲ್ಲದೇ ಮಾಡುತ್ತಿರುವ ಕೆಲಸ ಶ್ಲಾಘನೀಯ.

—ಮಾಲತಿ ಪಟ್ಟಣಶೆಟ್ಟಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in